**ಸಾಕ್ಷಿಗೆ ದಿನಾಂಕಃ06-12-2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ವಾದಿ ಪರ ಶ್ರೀ. HNS ವಕೀಲರಿಂದ ::**

ಈ ದಾವೆಯನ್ನು ವಾದಿ ನನ್ನ ವಿರುದ್ದ ಯಾವ ಕಾರಣಕ್ಕೆ ಹೂಡಿರುತ್ತಾರೆಂದು ನನಗೆ ತಿಳಿದಿರುತ್ತದೆ. 1978 ರಲ್ಲಿ ದಾವಾ ಶೆಡ್ಯೂಲ್ ಸ್ವತ್ತನ್ನು ವಾದಿಯ ಗಂಡನಿಗೆ ಸರ್ಕಾರದಿಂದ ಮಂಜೂರಾಗಿರುತ್ತದೆ ಎಂದರೆ ಸರಿ. ಸದರಿ ಮಂಜೂರಾತಿಯ ಅನ್ವಯ ವಾದಿಯ ಗಂಡ ಅವರ ಹೆಸರಿಗೆ ದಾವಾ ಶೆಡ್ಯೂಲ್ ಸ್ವತ್ತಿನ ಖಾತೆ ಬದಲಾವಣೆ ಮಾಡಿಕೊಂಡು ಅದರ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿ. ವಾದಿಯ ಗಂಡ ಮೃತರಾದ ನಂತರ ದಾವಾ ಶೆಡ್ಯೂಲ್ ಸ್ವತ್ತಿನ ಖಾತೆಯು ಪೌತಿ ಆಧಾರದಲ್ಲಿ ವಾದಿಯ ಹೆಸರಿಗೆ ಬಂದಿದ್ದು ಪ್ರಸ್ತುತದಲ್ಲಿ ಎಲ್ಲಾ ಕಂದಾಯ ದಾಖಲೆಗಳು ಅವರ ಹೆಸರಿಗೆ ಬದಲಾವಣೆ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ವಾದಿಯೇ ಪ್ರಸ್ತುತದಲ್ಲಿ ದಾವಾ ಶೆಡ್ಯೂಲ್ ಸ್ವತ್ತಿನ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ನಾನು ದಾವಾ ಶೆಡ್ಯೂಲ್ ಸ್ವತ್ತಿನ ಸ್ವಾಧೀನದಲ್ಲಿ 20-25 ವರ್ಷಗಳಿಂದ ಇರುತ್ತಾರೆ ಎಂದು ನುಡಿಯುತ್ತಾರೆ.

ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ದಿಃ 07.01.2019 ರಂದು ವಾದಿಯ ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ಬೋರ್ ಕೊರೆಸಲು ವಿದ್ಯುತ್ ಸಂಪರ್ಕ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿದ್ಯುತ್ ದಾಖಲೆಯು ನಿಪಿ27 ರಂತೆ ಇರುತ್ತದೆ ಎಂದರೆ ಸರಿ. ನಿಪಿ27 ರಲ್ಲಿ ವಾದಿಯ ಹೆಸರು ನಮೂದು ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆದರೆ ನಾನು ವಿದ್ಯುತ್ ಸಂಪರ್ಕ ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ನಾನು ವಿದ್ಯುತ್ ಸಂಪರ್ಕ ಪಡೆದಿರುತ್ತೇನೆ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲಾತಿಗಳು ಇರುವುದಿಲ್ಲ. ವಾದಿಯೇ ದಾವಾ ಶೆಡ್ಯೂಲ್ ಸ್ವತ್ತಿನ ಕಂದಾಯವನ್ನು ಇಲ್ಲಿಯವರೆಗೂ ಪಾವತಿ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ನಾನು ಯಾವುದೇ ಕಂದಾಯ ಪಾವತಿ ಮಾಡದಿದ್ದರೂ ದುರುದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ದಿಃ 19.12.2018 ರಂದು ವಾದಿಯು ದಾವಾ ಶೆಡ್ಯೂಲ್ ಸ್ವತ್ತಿನ ಬಳಿ ಬಂದಾಗ ನಾನು ಅನವಶ್ಯಕವಾಗಿ ಗಲಾಟೆ ಮಾಡಿದ ಕಾರಣ ವಾದಿ ನನ್ನ ವಿರುದ್ದ ಪೊಲೀಸರಿಗೆ ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದೂರು ನಿಪಿ30 ರಂತೆ ಇರುತ್ತದೆ ಎಂದರೆ ಸರಿಯಲ್ಲ.

ಸದರಿ ಪೊಲೀಸ್ ದೂರಿಗೆ ಸಂಬಂಧಪಟ್ಟಂತೆ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಸದರಿ ಹೇಳಿಕೆಯು ನಿಡಿ14 ರಂತೆ ಇರುತ್ತದೆ ಎಂದರೆ ಸರಿ. ಪೊಲೀಸರು ನಿಪಿ31 ರಂತೆ ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣವನ್ನು ಇತ್ಯರ್ಥಪಡಿಸಿಕೊಳ್ಳುವಂತೆ ಹಿಂಬರಹ ನೀಡಿರುತ್ತಾರೆ ಎಂದರೆ ಸರಿ. ನಾನು ದಾವೆಯಲ್ಲಿ ಹೂಡಿರುವ ತಕರಾರನ್ನು ತಯಾರಿಸಲು ನನ್ನ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ನನ್ನ ಮುಖ್ಯ ವಿಚಾರಣ ಪ್ರಮಾಣಪತ್ರದಲ್ಲಿ ವಿಚಾರಗಳನ್ನು ವಕೀಲರಿಗೆ ನಾನೇ ಹೇಳಿ ಬರೆಸಿರುತ್ತೇನೆ. ಸದರಿ ಎರಡು ದಾಖಲೆಯಲ್ಲಿ ಇರುವ ವಿಚಾರಗಳು ನನ್ನ ಪ್ರಕಾರ ಸರಿ ಇರುತ್ತದೆ. ನನ್ನ ಪ್ರತಿವಾದ ಪತ್ರದಲ್ಲಿ ದಿಃ 25.10.1987 ರಂದು ಒಂದು ಕರಾರು ಪತ್ರ ಆಗಿರುವ ಬಗ್ಗೆ ನಮೂದಿಸಿದ್ದು ಸದರಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಆ ರೀತಿ ಯಾವುದೇ ಕರಾರು ಪತ್ರವನ್ನು ಹಾಜರುಪಡಿಸದಿದ್ದರೂ ದುರುದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಅದೇ ರೀತಿ ನನ್ನ ಪ್ರತಿವಾದ ಪತ್ರದಲ್ಲಿ ನೀಲಕಂಠಪ್ಪ ರವರು ದಾವಾ ಶೆಡ್ಯೂಲ್ ಸ್ವತ್ತನ್ನು ಬಸವರಾಜಪ್ಪ ರವರ ಸ್ವಾಧೀನಕ್ಕೆ ವಹಿಸಿರುವುದಾಗಿ ತಿಳಿಸಿದ್ದು ಅದಕ್ಕೆ ಸಂಬಂಧಪಟ್ಟಂತೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಅದನ್ನು ತೋರಿಸಲು ನಾನು ಒಂದು ಕ್ರಯದ ಕರಾರು ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಆ ರೀತಿ ಯಾವುದೇ ದಾಖಲೆಯನ್ನು ಹಾಜರುಪಡಿಸದಿದ್ದರೂ ದುರುದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿಡಿ1, 2, 15 ರಿಂದ 20 ಪೋಟೋಗಳಲ್ಲಿ ಕಂಡು ಬರುವ ಮರಗಳಿಗೆ ಸುಮಾರು 10 ವರ್ಷ ವಯಸ್ಸು ಆಗಿರಬಹುದು. ಸದರಿ ಪೋಟೋಗಳಲ್ಲಿ ಅಡಿಕೆ ಬಿಟ್ಟು ಬೇರೆ ಯಾವುದೇ ಗಿಡ ಕಂಡು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು 2014 ನೇ ಸಾಲಿನಲ್ಲಿ ವಾದಿಯ ಹೆಸರಿಗೆ ದಾವಾ ಶೆಡ್ಯೂಲ್ ಸ್ವತ್ತು ಇರುವುದಾಗಿ ತಿಳಿಸಿರುವ ವಿಚಾರ ಸುಳ್ಳಾಗಿರುತ್ತದೆ ಎಂದರೆ ಸರಿಯಲ್ಲ. ವಾದಿಯ ಜೊತೆ ಯಾವುದೇ ಕರಾರು ಪತ್ರ ಆಗಿರುವ ಬಗ್ಗೆ ದಾಖಲೆಯನ್ನು ನಾನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ದಾವಾ ಶೆಡ್ಯೂಲ್ ಸ್ವತ್ತಿನ ಸ್ವಾಧೀನದಲ್ಲಿ ಇರುವ ಬಗ್ಗೆ ತೋರಿಸಲು ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸದಿದ್ದರೂ ದುರುದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು

ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣ ಪ್ರಮಾಣಪತ್ರದಲ್ಲಿ ಹೇಳಿರುವ 1996 ಕ್ರಯ ಕರಾರು ಪತ್ರಕ್ಕೆ ಸಂಬಂಧಪಟ್ಟಂತೆ ನನ್ನ ಲಿಖಿತ ಹೇಳಿಕೆಯಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ದಿಃ 25.10.1987 ರಂದು ಆಗಿರುತ್ತದೆ ಎಂದು ಹೇಳುತ್ತಿರುವ ಕ್ರಯಪತ್ರಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣ ಪ್ರಮಾಣಪತ್ರದಲ್ಲಿ ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ಇರುವ ಅಡಿಕೆ ಸಸಿಗಳಿಗೆ 6-7 ವರ್ಷ ಎಂದು ತಿಳಿಸಿರುವ ವಿಚಾರವನ್ನು ನನ್ನ ಲಿಖಿತ ಹೇಳಿಕೆಯಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ಇರುವ ಬೆಳೆಗಳಿಗೆ ಸಂಬಂಧಪಟ್ಟಂತೆ ಯಾವುದೇ ಫೋಟೋಗಳನ್ನು ಹಾಜರುಪಡಿಸದೇ ಆ ರೀತಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ವಾದಿಯ ಜೊತೆ 2016 ನೇ ಸಾಲಿನಲ್ಲಿ ಯಾವುದೇ ಒಪ್ಪಂದ ಮಾಡಿಕೊಳ್ಳದಿದ್ದರೂ ಸಹ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ನಿಡಿ24 ನೀಲಕಂಠಪ್ಪ ಮತ್ತು ಬಸವರಾಜ್ ರವರ ನಡುವೆ ಆದ ಕ್ರಯದ ಕರಾರು ಪತ್ರ ಆಗಿರುತ್ತದೆ. ಸದರಿ ದಾಖಲೆಯು ದಿಃ 25.04.1987 ರ ದಾಖಲೆ ಆಗಿರುತ್ತದೆ ಎಂದರೆ ಸರಿ. ನಿಡಿ24 ರ ಬಗ್ಗೆ ನನ್ನ ತಕರಾರಿನಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ24 ನ್ನು ದಾವೆಗೋಸ್ಕರ ದುರುದ್ದೇಶದಿಂದ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ24 ರಲ್ಲಿ ದಾವಾ ಶೆಡ್ಯೂಲ್ ಸ್ವತ್ತಿನ ಮೂಲ ದಾಖಲಾತಿಗಳನ್ನು ವರ್ಗಾವಣೆ ಮಾಡಿರುವುದಾಗಿ ತಿಳಿಸಿದ್ದು, ದಾವಾ ಶೆಡ್ಯೂಲ್ ಸ್ವತ್ತಿನ ಮೂಲ ದಾಖಲೆಗಳು ನನ್ನ ಬಳಿ ಇರುವುದಿಲ್ಲ. ನಿಡಿ24 ಮಾಡುವ ಸಮಯದಲ್ಲಿ 10 ರೂಪಾಯಿ ಮುಖ ಬೆಲೆಯ stamp paper ಇರಲಿಲ್ಲ ಎಂದರೆ ಸರಿಯಲ್ಲ. ನಿಡಿ24 ರಲ್ಲಿ ಯಾವುದೇ ದಿನಾಂಕದ ಸೀಲ್ ಇರುವುದಿಲ್ಲ ಎಂದರೆ ಸರಿ.

ನಿಡಿ 25 ನೀಲಕಂಠಪ್ಪ ಮತ್ತು ಬಸವರಾಜ್ ರವರ ನಡುವೆ ಆದ ಕ್ರಯದ ಕರಾರು ಪತ್ರ ಆಗಿರುತ್ತದೆ. ನಿಡಿ25 ಆಗುವ ಸಮಯದಲ್ಲಿ ನೀಲಕಂಠಪ್ಪನ ಹೆಸರಿನಲ್ಲಿ ದಾವಾ ಶೆಡ್ಯೂಲ್ ಸ್ವತ್ತಿನ ಖಾತೆ ಇತ್ತು. ಸದರಿ ಕಂದಾಯ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಿಡಿ25 ರಲ್ಲಿ ನಾನೇ ಸ್ವಯಾರ್ಜಿತವಾಗಿ ಕ್ರಯಕ್ಕೆ ಪಡೆದಿರುವುದಾಗಿ ನಮೂದು ಇದ್ದು, ಯಾರು ಕ್ರಯಕ್ಕೆ ಪಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಡಿ25 ಕ್ಕೆ

ಸಂಬಂಧಪಟ್ಟಂತೆ  ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಿಡಿ25 ರಲ್ಲಿ ನೋಂದಣಿ ಸಮಯದಲ್ಲಿ ಸ್ವಾಧೀನವನ್ನು ವಹಿಸುವುದಾಗಿ ನಮೂದು ಇರುತ್ತದೆ ಎಂದರೆ ಸರಿ. ನಿಡಿ25 ನ್ನು ನಾವು ನೋಂದಣಿ ಮಾಡಿಸಿರುವುದಿಲ್ಲ. ನಿಡಿ25 ನ್ನು ನೋಂದಣಿ ಮಾಡಿಸಿಕೊಳ್ಳಲು ನಾನು ಪ್ರಯತ್ನ ಪಟ್ಟಿರುವುದಿಲ್ಲ. ನಿಡಿ24 ಮತ್ತು 25 ನ್ನು ದಾವೆಗೋಸ್ಕರ ದುರುದ್ದೇಶದಿಂದ ಸೃಷ್ಟಿ ಮಾಡಿರುವ ಕಾರಣ ಸದರಿ ವಿಚಾರದ ಬಗ್ಗೆ ನನ್ನ ಪ್ರತಿವಾದ ಪತ್ರದಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಹಾಜರುಪಡಿಸಿರುವ ನಿಡಿ5 ದಿನಾಂಕ 20.12.2015 ರ ತಾರೀಖಿನದ್ದಾಗಿರುತ್ತದೆ ಎಂದರೆ ಸರಿ. ಒಂದು ಅಡಿ ಬೋರ್ ವೆಲ್ ಕೊರೆಯಲು 180 ರೂಪಾಯಿ ಆಗುತ್ತದೆ. ನಿಡಿ5 ನ್ನು ದಾವೆಗೋಸ್ಕರ ದುರುದ್ದೇಶದಿಂದ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನಿಡಿ4 ರ ಪ್ರಕಾರ ದಿಃ 21.12.2015 ರಂದು ಬೋರ್ ವೆಲ್ ಕೊರೆದಿರುವುದಾಗಿ ನಮೂದು ಇರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಬೋರ್ ಕೊರೆದ ನಂತರ ಬಿಲ್ ನೀಡಲಾಗುತ್ತದೆ ಎಂದರೆ ಸರಿ. ನಿಡಿ4 ನ್ನು ದಾವೆಗೋಸ್ಕರ ದುರುದ್ದೇಶದಿಂದ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ4 ಮತ್ತು 5 ನೀಡಿರುವ ವ್ಯಕ್ತಿಯನ್ನು ಈ ದಾವೆಯಲ್ಲಿ ಸಾಕ್ಷಿದಾರರನ್ನಾಗಿ ಮಾಡಲು ಯಾವುದೇ ತೊಂದರೆ ಇರುವುದಿಲ್ಲ.

ನಾವು ಬೋರ್ ವೆಲ್ ಕೊರೆಸಿದ 7 ತಿಂಗಳಿಗೆ ಪೈಪ್ ಅನ್ನು ಅಳವಡಿಸಿರುತ್ತೇನೆ. ನಿಡಿ6 ರಲ್ಲಿ ಕಂಡು ಬರುವ ಮೌಲ್ಯವು ಇವತ್ತಿನ ಮೌಲ್ಯವಾಗಿದ್ದ ಕಾರಣ ಅದನ್ನು ಸಹ ಈ ದಾವೆಗೋಸ್ಕರ ದುರುದ್ದೇಶದಿಂದ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ6 ನೀಡಿರುವ ವ್ಯಕ್ತಿಯನ್ನು ಈ ದಾವೆಯಲ್ಲಿ ಸಾಕ್ಷಿದಾರರನ್ನಾಗಿ ಮಾಡಲು ಯಾವುದೇ ತೊಂದರೆ ಇರುವುದಿಲ್ಲ. ನಿಡಿ8 567 ಕ್ರಮ ಸಂಖ್ಯೆಯ ಬಿಲ್ ಆಗಿರುತ್ತದೆ ಎಂದರೆ ಸರಿ. ಅದೇ ರೀತಿ ನಿಡಿ9 ಬಿಲ್ ನ ಕ್ರಯ ಸಂಖ್ಯೆ 570 ಆಗಿರುತ್ತದೆ ಎಂದರೆ ಸರಿ. ಸದರಿ ದಾಖಲೆಗಳನ್ನು ಈ ದಾವೆಗೋಸ್ಕರ ದುರುದ್ದೇಶದಿಂದ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾಖಲಾಗಳಲ್ಲಿ ಯಾವುದೇ ಜಾಗದ ಸರ್ವೇ ನಂಬರ್ ಕಂಡು ಬರುವುದಿಲ್ಲ ಎಂದರೆ ಸರಿ. ನಿಡಿ10 ಕೇವಲ ಒಂದು ಪತ್ರವಾಗಿರುತ್ತದೆ ಎಂದರೆ ಸರಿ. ನಾನು ದಾವಾ ಶೆಡ್ಯೂಲ್ ಸ್ವತ್ತಿಗೆ ದಿಃ 20.03.2017 ರಂದು ಕಲ್ಲು ಕಂಬವನ್ನು ಅಳವಡಿಸಿರುತ್ತೇನೆ. ಆದಾದ  6-7 ತಿಂಗಳ ನಂತರ ತಂತಿ ಬೇಲಿಯನ್ನು ಅಳವಡಿಸಿರುತ್ತೇನೆ. ನಿಡಿ9 ಮತ್ತು 10 ನ್ನು  ದಾವೆಗೋಸ್ಕರ ದುರುದ್ದೇಶದಿಂದ ಸೃಷ್ಟಿ

ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ9 ಮತ್ತು 10 ನ್ನು ನೀಡಿರುವ ವ್ಯಕ್ತಿಯನ್ನು ಈ ದಾವೆಯಲ್ಲಿ ಸಾಕ್ಷಿದಾರರನ್ನಾಗಿ ಮಾಡಲು ಯಾವುದೇ ತೊಂದರೆ ಇರುವುದಿಲ್ಲ.

ನಿಡಿ12 ರಲ್ಲಿ ಕಂಡು ಬರುವ ಅರ್ಜಿದಾರರ ಸಹಿ ನನ್ನ ತಾಯಿಯದ್ದಾಗಿರುತ್ತದೆ. ಸದರಿ ದಾಖಲೆಯಲ್ಲಿ ವಾದಿಯು ಖಾತಾ ಬದಲಾವಣೆಗೆ ನೀಡಿರುವ ದಾಖಲೆಯನ್ನು ಕೊಡಿ ಎಂದು ನೀಡಿರುವ ಪತ್ರವಾಗಿರುತ್ತದೆ ಎಂದರೆ ಸರಿ. ಸದರಿ ಸಮಯದಲ್ಲಿ ವಾದಿಯು ದಾವಾ ಶೆಡ್ಯೂಲ್ ಸ್ವತ್ತಿನ ಸ್ವಾಧೀನದಲ್ಲಿ ಇದ್ದ ಕಾರಣ ಅಳತೆಗೆ ಅರ್ಜಿಯನ್ನು ನೀಡಿದ್ದರು ಎಂದರೆ ಸರಿ. ನಿಡಿ11 ನ್ನು ಈ ದಾವೆಯನ್ನು ಹೂಡಿದ ನಂತರದಲ್ಲಿ ಸಲ್ಲಿಸಿರುತ್ತೇವೆ ಎಂದರೆ ಸರಿ.

ನಿಡಿ22 ರಾಘವ ಎನ್ನುವವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಸದರಿ ಸಾಲಿಗೆ ಸಂಬಂಧಪಟ್ಟಂತೆಯೇ ವಾದಿಯು ಸಹ ನಿಪಿ28 ರಂತೆ ಕಂದಾಯ ಪಾವತಿ ಮಾಡಿರುತ್ತಾರೆ ಎಂದರೆ ಸರಿ. ನಿಡಿ23 ರಲ್ಲಿ ವಾದಿಯು ಸಹಿ ಮಾಡಿರುವುದಿಲ್ಲ ಎಂದರೆ ಸರಿ.

ವಾದಿಯು ಭದ್ರಾವತಿಯಲ್ಲಿ ಇರುವ ವಿಚಾರವನ್ನು ದುರುಪಯೋಗಪಡಿಸಿಕೊಂಡು ದಾವಾ ಶೆಡ್ಯೂಲ್ ಸ್ವತ್ತನ್ನು ಕಬಳಿಸುವ ದುರುದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ದಾವಾ ಶೆಡ್ಯೂಲ್ ಸ್ವತ್ತಿನ ಸ್ವಾಧೀನದಲ್ಲಿ ಇರುವುದನ್ನು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.ಇವತ್ತಿನವರೆಗೂ ವಾದಿಯೇ ದಾವಾ ಶೆಡ್ಯೂಲ್ ಸ್ವತ್ತಿನ ಸ್ವಾಧೀನದಲ್ಲಿ ಇದ್ದು ಅದಕ್ಕೆ ನಾನು ತೊಂದರೆ ನೀಡಿದ ಕಾರಣ ಅವರು ಈ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: